ಒಂದೊಂದು ಬಾಂಡೆಡ್ ಡಿಪೋದಲ್ಲಿಯೂ ಒಬ್ಬ ಎಕ್ಸೈಸ್ ಸೂಪರ್‌ವೈಸರ್, ಇಬ್ಬರು ಮೇಸ್ತ್ರಿಗಳು, ಇಬ್ಬರು ಜವಾನರು, ಇಬ್ಬರು ಗುಮಾಸ್ತರು ಇದ್ದಾರೆ. ಈ ಸಿಬ್ಬಂದಿಯನ್ನಾದರೂ ಕಡಮೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸಿಬ್ಬಂದಿಯನ್ನು ತೆಗೆದುಹಾಕಲಿಕ್ಕೆ ಆಗುವುದಿಲ್ಲ. ಇದರ ಹೊರತಾಗಿ ಅವರಿಗೆ ಬೇರೆ ಕೆಲಸವಿರುತ್ತದೆ. ಎಲ್ಲರಿಗೂ ಬ್ಯಾರಲ್‌ಗಳಲ್ಲಿ ಕೊಡುವ ಅಗತ್ಯ ಇರುವುದಿಲ್ಲ. ಎಲ್ಲ ಕಡೆಗೂ ಪಾನನಿರೋಧವನ್ನು ತೆಗೆದುಹಾಕಿದ್ದರಿಂದ ಬೇಡಿಕೆ ಹೆಚ್ಚಾಗುತ್ತದೆ. ಒಂದು ತಾಲ್ಲೂಕಿನಲ್ಲಿ ಒಬ್ಬ ಕಂಟ್ರಾಕ್ಟರಿಗೆ ಹೆಚ್ಚು ಡಿಮಾಂಡ್ ಇರುತ್ತದೆ. ಕೆಲವು ಕೇಂದ್ರಗಳಲ್ಲಿ ಹೆಚ್ಚು ಬೇಡಿಕೆ ಇರುತ್ತದೆ, ಕೆಲವು ಕಡೆ ಹೆಚ್ಚಾಗಿ ಇರುವುದಿಲ್ಲ.

Amendment of Rules regarding sale price for Arrack and Toddy

194. Sri K. T. SHAMAIAH GOWDA (Local Authorities' Constituency).—

Will the Minister for Finance, Planning and Youth Welfare be pleased to state :—

(*a*) whether the Government has amended the Rules with regard to the fixation of maximum and minimum sale price for arrack and toddy ;

(*b*) whether there was a strong objection from the public and the Excise Contractors for amending the Rules ;

(*c*) the extraordinary circumstances that forced Government to amend these rules ?

Sri RAMAKRISHNA HEGDE (Minister for Finance, Planning and Youth Welfare).—

(*a*) Yes.

(*b*) No.

(*c*) For administrative reasons.

ಶ್ರೀ ಕೆ. ಟಿ. ಶಾಮಯ್ಯಗೌಡ.—(ಎ) ಪ್ರಶ್ನೆಯಲ್ಲಿ "whether the Government has amended the rules with regard to fixation of maximum and minimum price for toddy" ಯೆಸ್ ಎಂದು ಉತ್ತರ ಕೊಟ್ಟಿದ್ದೀರಿ. ಹಿಂದೆ ಈ ರೀತಿ ರೂಲ್ ಇತ್ತು :

> "The Deputy Commissioner shall have the right to fix the maximum and minimum retail price if he considers it necessary in the interest of the State and to check unhealthy competition among the licencees."

ಅದನ್ನು ಪೂರ್ಣವಾಗಿ ಒಪ್ಪಿ 21 ನೆಯ ಕ್ಲಾಜನ್ನು ಮಾತ್ರ ತೆಗೆದಿರುವುದಕ್ಕೆ ಕಾರಣವೇನು ?

Sri RAMAKRISHNA HEGDE.—In actual practice, it is never observed. Sometimes, some contractors used to sell it at a price higher than the maximum and sometime some contractors used to sell less than the maximum. Therefore, in a free competition, it is not desirable to fix either the maximum or the minimum price.

ಶ್ರೀ ಕೆ. ಟಿ. ಶಾಮಯ್ಯಗೌಡ.—ರೂಲ್ಸ್ ತಿದ್ದುಪಡಿ ಮಾಡಲು ಕಾರಣ ಅಡ್ಮಿನಿಸ್ಟ್ರೇಟಿವ್ ರೀಸನ್ಸ್ ಎಂದು ತಿಳಿಸಿಲಾಗಿದೆ. ಕಾಂಪಿಟೀಷನ್ನಿಗೆ ಅವಕಾಶ ಕೊಟ್ಟರೆ ಲಾಭ ಬರುವುದು ಎಂದು ಈಗ ಹೇಳಿದರು. ಇದರಲ್ಲಿ ಯಾವುದು ನರಿ ?

ಶ್ರೀ ರಾಮಕೃಷ್ಣ ಹೆಗಡೆ.—ಎರಡೂ ನರಿ. ಅಡ್ಮಿನಿಸ್ಟ್ರೇಟೀವ್ ರೀಸನ್ಸ್ ಎಂದು ಹೇಳುವು ಬೇಕೆಂದರೆ ಮ್ಯಾಕ್ಸಿಮಂ ಪ್ರೈಸ್ ಫಿಕ್ಸ್ ಮಾಡದೆ ಎನ್‌ಫೋರ್ಸ್ ಮಾಡುವುದು ಕಷ್ಟ. ಪ್ರತಿ ಯೊಂದು ಅಂಗಡಿಗೂ ಹೋಗಿ ಯಾವ ಬೆಲೆಯಲ್ಲಿ ಮಾರಾಟವಾಗುತ್ತಿದೆ ಎಂದು ನೋಡುವುದಕ್ಕಾಗು ವುದಿಲ್ಲ. ತಾಲ್ಲೂಕುವಾರು ಮಾರುವುದರಿಂದ ಕೆಲವು ಕಂಟ್ರಾಕ್ಟರುಗಳೇನು ನೊಂದಿದ್ದಾರೆ ಅವರಿಗೆ ಅನುಕೂಲವಾಗುವುದು.

ಶ್ರೀ ಕೆ. ಟಿ. ಶಾಮಯ್ಯಗೌಡ.—ತಾಲ್ಲೂಕುವೈಜ್ ಮಾಡಬೇಕೆಂದು ಹೇಳಿದಮೇರೆ ಮಾಡಿ ದ್ದಾರೆ. ಆದರೆ ಮುನಾಪಲಸ್ಟ್ಸ್ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬ್ಯಾರರ್ ತೆಗೆದು ಕೊಂಡುಹೋಗಿ ಸಣ್ಣ ಕಂಟ್ರಾಕ್ಟರುಗಳನ್ನು ಕೊಲೆ ಮಾಡಲು ಎಂಬ ಉದ್ದೇಶದಿಂದ ಹಿಂದಿನ ಸರಕಾರ ಮಾಡಿದೆ. ಅದರಿಂದ ಸರಕಾರಕ್ಕೆ ಉತ್ಪತ್ತಿ ಬರುವುದು. ಅದುದರಿಂದ ಸಣ್ಣ ಕಂಟ್ರಾಕ್ಟರುಗಳನ್ನು ತೆಗೆದುಕೊಳ್ಳುವುದು ಅನುಕೂಲವಲ್ಲವೇ ?

Sri RAMAKRISHNA HEGDE.—It is a double-edged weapon. It can cut both sides. It is practically the survival of the fittest. ಇದರಿಂದ ಸಣ್ಣ ಕಂಟ್ರಾಕ್ಟರುಗಳಿಗೆ ಸಹಾಯವೇ ಆಗುವುದು. ದೊಡ್ಡ ಕಂಟ್ರಾಕ್ಟರುಗಳು ಮನಸ್ಸು ಮಾಡಿದರೆ ಬಹಳ ಕಾಂಪಿಟೀಷನ್ನಿಗೆ ಅವಕಾಶ ಕೊಡುವುದಿಲ್ಲ.

ಶ್ರೀ ಕೆ. ಟಿ. ಶಾಮಯ್ಯಗೌಡ.—ಈ ವರ್ಷ ಹರಾಜಿನಲ್ಲಿ ಸೇಕಡ 75 ಭಾಗ ಸಣ್ಣ ಕಂಟ್ರಾಕ್ಟರುಗಳಿಗೆ ಅವಕಾಶವಾಗಿರುವುದರಿಂದ ತಾನೆ ಉತ್ಪತ್ತಿ ಹೆಚ್ಚರುವುದು ?

ಶ್ರೀ ರಾಮಕೃಷ್ಣ ಹೆಗಡೆ.—ಹೇಗೆ ಹೇಳಲಿ ? ಕೆಲವು ಕಡೆ ಅವರು, ಬೇರೆ ಕಡೆ ಬೇರೆಯವರು ಹೆಚ್ಚು ಮಾರಿರಬಹುದು. ಇದಕ್ಕೆ ಕಾರಣ ಗೊತ್ತಾಗುವುದಿಲ್ಲ.

ಉಪಸಭಾಪತಿಯವರು.—ಶ್ರೀ ಹೆಚ್. ಕೆ. ಶಿವರುದ್ರಪ್ಪನವರು ಶ್ರೀ ಎಂ. ಲಿಂಗಣ್ಣನವರ ಪರವಾಗಿ ಪ್ರಶ್ನೆ ನಂ. 216 ಹಾಕಬಹುದು.

Construction of a New Bridge across Kabini near Nanjangud

216. Sri M. LINGANNA (Local Authorities' Constituency) :—

Will the Minister for Public Works be pleased to state:—

(*a*) whether an estimate has been prepared to construct a new bridge across Kabini near Nanjangud Town in place of the old one;

(*b*) if so, the estimated cost of the same ;

(*c*) when the work will be taken up ?

Sri K. LAKKAPPA (Minister for Public Works).—

(*a*) Yes.

(*b*) Rs. 16.00 lakhs.

(*c*) After the approval of Government of India is received.

ಶ್ರೀ ಎಚ್. ಕೆ. ಶಿವರುದ್ರಪ್ಪ.—16 ಲಕ್ಷಕ್ಕೆ ಯಾವ ಇಸವಿಯಲ್ಲಿ ಅಂದಾಜು ಮಾಡಿರುವುದು ?

† ಶ್ರೀ ಕೆ. ಲಕ್ಕಪ್ಪ.—1967 ರಲ್ಲಿ.